**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 49/2022**

| | | |
|---|---|---|
| ಹೆಸರು | ಚಿನ್ನಸ್ವಾಮಿ | ಸಿ.ಡಬ್ಲ್ಯೂ 1 |
| ತಂದೆಯ ಹೆಸರು | ಬೋರೇಗೌಡ | ಪಿ.ಡಬ್ಲ್ಯೂ 2 |
| ವಯಸ್ಸು | 48 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ತಮ್ಮಡಹಳ್ಳಿ ಗ್ರಾಮ | |

ಸಾಕ್ಷಿಗೆ ದಿನಾಂಕಃ 12.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ ಃ**

ಚಾ.ಸಾ. 2 ರಿಂದ 12 ರವರ ಪರಿಚಯವಿದೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿರುವುದಿಲ್ಲ. ಪೋಲೀಸ್ ಠಾಣೆಗೆ ಹೋದಾಗ ಈಗ ನೋಡುತ್ತಿರುವ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳು ದೂರು ಮತ್ತು ಸ್ದಳ ಮಹಜರ್ ಅಗಿದ್ದು, ಅವುಗಳನ್ನು ನಿಪಿ-2 ಮತ್ತು ನಿಪಿ-3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-2ಎ ಮತ್ತು 3ಎ ಎಂದು ಗುರುತಿಸಲಾಯಿತು. ನಿಪಿ-2 ಮತ್ತು 3 ರಲ್ಲಿ ಏನೂ ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**

**ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ**

ದಿನಾಂಕ 16.10.2021 ರಂದು ಸಂಜೆ 7.30 ರ ಅವದಿಯಲ್ಲಿ ನಾನು ರಾಜಣ್ಣ ರವರನ್ನು ನನ್ನ ಸ್ಕೂಟರನಲ್ಲಿ ಕೂರಿಸಿಕೊಂಡು ಮಳವಳ್ಳಿಗೆ ಬರುತ್ತಿದ್ದಾಗ ರಾಜಣ್ಣನು ಶೌಚಕ್ಕೆ ಹೋಗಲು ಬೈಕನ್ನು ನಿಲ್ಲಿಸುವಂತೆ ಹೇಳಿದಾಗ ನಾನು ನಿಲ್ಲಿಸಿದ್ದು, ಅವರು ಬೈಕಿನಿಂದ ಕೆಳಗೆ ಇಳಿದು ಹೋದಾಗ ನಾನು ಬೈಕನ್ನು

ಸ್ವಲ್ಪ ಮುಂದೆ ಹೋಗಿ ನಿಲ್ಲಿಸಿಕೊಂಡಿದ್ದು, ಆಗ 1ನೇ ಅರೋಪಿಯು ಚಾಸಾ-3 ರವರನ್ನು ಕೂರಿಸಿಕೊಂಡು ತನ್ನ ಬೈಕನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಕಾಲಕ್ಕೆ 2ನೇ ಅರೋಪಿಯು ತನ್ನ ಕಾರನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಾಜಣ್ಣ ರವರಿಗೆ ಡಿಕ್ಕಿಪಡಿಸಿದ್ದು, ಇದರಿಂದ ರಾಜಣ್ಣರವರು ಮೃತರಾಗಿರುತ್ತಾರೆ ಎಂದು ಸದರಿ ಅಪಘಾತಕ್ಕೆ ಅರೋಪಿತರು ಕಾರಣರೆಂದು ನಾನು ನಿಪಿ-2 ರಂತೆ ಪೋಲೀಸರಿಗೆ ದೂರು ನೀಡಿರುತ್ತೇನ ಎಂದರೆ ಸರಿಯಲ್ಲ.

ಸದರಿ ದೂರಿನ ಸಂಬಂಧವಾಗಿದಿನಾಂಕ 17.10.2021 ರಂದು ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-4 ಮತ್ತು 5 ರವ ಸಮಕ್ಷಮ ನಿಪಿ-3 ರಂತೆ ಸ್ದಳ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲು. ಎಲ್ಲಾ ಗೊತ್ತಿದ್ದರೂ ಅರೋಪಿತರಿಗೆ ಸಹಾಯ ಮಾಡಲೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.